**ದಿಃ10.09.2024 ರಂದು ಮಾಡಿದ ಅರ್ಜಿಯಲ್ಲಿನ ಆದೇಶದಂತೆ, ಪ್ರಾಸಾ-2- ಸುರೇಶ ಪಾಯಪ್ಪಗೌಡರ ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 30.11.2024.**

**ಪಾಟಿ ಸವಾಲುಃ ಶ್ರೀ ಎಂ.ಎಂ. ಕುಕನೂರ, 2 ನೇ ಆರೋಪಿ ಪರ ವಕೀಲರಿಂದಃ**

5. ನಾನು ಗದಗನ ಒಕ್ಕಲಗೇರಿ ಓಣಿಯಲ್ಲಿ ವಾಸವಾಗಿರುತ್ತೇನೆ. ದಿಃ 24.01.2018 ರಂದು ನಾನು ಚಹಾ ಮಾರಾಟ ಮಾಡುತ್ತಿದ್ದೆನು. ನಾನು ಕಳೆದ 6 ತಿಂಗಳುಗಳಿಂದ ಪೇಂಟಿಂಗ ಕೆಲಸ ಮಾಡುತ್ತಿದ್ದೇನೆ. ಚಹಾ ಮಾರಾಟಕ್ಕೆ ಸಂಬಂಧಿಸಿದಂತೆ ನಾನು ಗದಗ ನಗರಸಭೆಯಿಂದ ಪರವಾನಗೆಯನ್ನು ಪಡೆದುಕೊಂಡಿರುವುದಿಲ್ಲ.

6. ದಿಃ 24.01.2018 ರಂದು ಪೋಲೀಸರು ಪಂಚನಾಮೆಗೆ ಬರಬೇಕೆಂದು ನನಗೆ ನೋಟೀಸನ್ನು ಕೊಟ್ಟಿರಲಿಲ್ಲ. ಗುನ್ಹಾ ಸ್ಥಳದಲ್ಲಿ ಬೀದಿ ದೀಪದ ಬೆಳಕು ಇತ್ತು. ಆಗ ಒಬ್ಬರ ಮುಖ ಒಬ್ಬರಿಗೆ ಅಷ್ಟು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಪಂಚನಾಮೆಗೆ ನಾನು ಪೋಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-3 ರಿಂದ 5 ಗಳನ್ನು ಪೋಲೀಸರು ನನಗೆ ಪೋಲೀಸ ಠಾಣೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ.

7. ದಿಃ 24.01.2018 ರಂದು ರಾತ್ರಿ ನಾನು ಪೋಲೀಸರ ಜೊತೆಗೆ ಗುನ್ಹಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದ ವಿಚಾರವನ್ನು ಪೋಲೀಸರು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಗುನ್ಹಾ ಸ್ಥಳದ ಚೆಕ್ಕಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಗುನ್ಹಾ ಸ್ಥಳದ ಯಾವ ದಿಕ್ಕಿಗೆ ಬೀದಿ ದೀಪದ ಕಂಬಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ.

8. ನಾನು ಗದಗ ಶಹರ ಪೋಲೀಸ ಠಾಣೆಯ ಖಾಯಂ ಪಂಚ ಇರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ.

**ಪಾಟಿ ಸವಾಲುಃ ಶ್ರೀ ಜೆ.ವಿ. ಪಠಾಣ, 3 ನೇ ಆರೋಪಿ ಪರ ವಕೀಲರಿಂದಃ**

**(ಶ್ರೀ ಎಂ.ಎಸ್. ಆರ್. ವಕೀಲರು 2 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಪಾಟಿ ಸವಾಲುಃ ಶ್ರೀ ಜಿ.ಡಿ. ಜಂತ್ಲಿ, 6 ನೇ ಆರೋಪಿ ಪರ ವಕೀಲರಿಂದಃ**

**(ಶ್ರಿ ಎ.ಎಸ್. ಹೊಸೂರ ವಕೀಲರು 2 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಪಾಟಿ ಸವಾಲುಃ ಶ್ರೀ ಐ.ಎ. ಬೇಪಾರಿ, 8 ನೇ ಆರೋಪಿ ಪರ ವಕೀಲರಿಂದಃ**

**(ಶ್ರೀಮತಿ ಆರ್.ಡಿ. ಎಲ್. ವಕೀಲರು, 2 ನೇ ಆರೋಪಿ ಪರವಾಗಿ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸರಿ ಅದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಗದಗ